**ಕರ್ನಾಟಕ ಸರಕಾರ**

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಗಳೂರು ವಿಭಾಗ, ಲೋಕೋಪಯೋಗಿ ಬಹುಮಹಡಿ ಕಟ್ಟಡ, ನೆಹರು ಮೈದಾನದ ಎದುರು, ಮಂಗಳೂರು – 575001**

**ಫೋನ್:0824-2423913, ಫ್ಯಾಕ್ಸ್-0824-2411242**

**email:** dcf_mngt@yahoo.co.in, **dcfmng@aranya.gov.in**

ಸಂಖ್ಯೆ : ಆಯವ್ಯಯ/ವಿವ-10(9):/ಜೇನುಪೆಟ್ಟಿಗೆ/ಟೆಂಡರ್:2019-20 ದಿನಾಂಕ:24-04-2019

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಅಂಗೀಕೃತ ಸಂಸ್ಥೆಗಳಿಗೆ ತಿಳಿಯಪಡಿಸುವುದೇನೆಂದರೆ, 2019-20 ನೇ ಸಾಲಿನಲ್ಲಿ ಮಂಗಳೂರು ಅರಣ್ಯ ವಿಭಾಗದ ವ್ಯಾಪ್ತಿಯ ಅರಣ್ಯ ಪ್ರದೇಶದ ಅಂಚಿನ ಗ್ರಾಮಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಿತರಿಸಲು ಈ ಕೆಳಗಿನ ಅನುಸೂಚಿಯಲ್ಲಿ ನಮೂದಿಸಿರುವ ವಿವರಗಳ ಪ್ರಕಾರ ಜೇನುಪೆಟ್ಟಿಗೆ ಮತ್ತು ಸ್ಟಾಂಡ್ ಸರಬರಾಜು ಮಾಡಲು ಅಂಗೀಕೃತ ಸಂಸ್ಥೆಗಳಿಂದ ಅಥವಾ ಅಂಗೀಕೃತ ಸಂಸ್ಥೆಗಳ ವಿತರಕರಿಂದ ದಿನಾಂಕ:**06-05-2019** ರ ಅಪರಾಹ್ನ 3.00 ಗಂಟೆಯೊಳಗೆ ಮೊಹರು ಮಾಡಿದ ಲಕೋಟೆಯಲ್ಲಿ ಟೆಂಡರನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಪ್ರಾದೇಶಿಕ ವಿಭಾಗ, ಮಂಗಳೂರು ಇವರಿಗೆ ಸಲ್ಲಿಸಲು ಕೋರಿದೆ. ಟೆಂಡರ್‌ದಾರರ ಸಮಕ್ಷಮದಲ್ಲಿ ಟೆಂಡರ್ ಲಕೋಟೆಯನ್ನು ಅದೇ ದಿನ ಅಪರಾಹ್ನ 4.00 ಗಂಟೆಗೆ ತೆರೆಯಲಾಗುವುದು. ಒಂದು ವೇಳೆ ಸದ್ರಿ ದಿನ ಸಾರ್ವತ್ರಿಕ ರಜಾ ಎಂದು ಘೋಷಿಸಲಾದರೆ ಮುಂದಿನ ಕೆಲಸದ ದಿನದಂದು ಇದೇ ಕೆಲಸದ ಸಮಯದ ತನಕ ಟೆಂಡರನ್ನು ಸ್ವೀಕರಿಸಿ ತೆರೆಯಲಾಗುವುದು.

ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಗುತ್ತಿಗೆದಾರರು ಟೆಂಡರ್ ಹಾಕದಿದ್ದಲ್ಲಿ ಇದೇ ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಮರುಟೆಂಡರನ್ನು ದಿನಾಂಕ:**10-05-2019** ರಂದು ಅಪರಾಹ್ನ 3.00 ಗಂಟೆಯೊಳಗೆ ಕರೆಯಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಸದರಿ ದಿನಾಂಕದಂದೇ ಟೆಂಡರುದಾರರ ಸಮಕ್ಷಮದಲ್ಲಿ ಟೆಂಡರ್ ಲಕೋಟೆಯನ್ನು ಅದೇ ದಿನ ಅಪರಾಹ್ನ 4.00 ಗಂಟೆಗೆ ತೆರೆಯಲಾಗುವುದು.

**ಸರಬರಾಜು ಮಾಡಬೇಕಾದ ಜೇನುಪೆಟ್ಟಿಗೆಗಳ ವಿವರ :-**

| ಕ್ರಮ ಸಂಖ್ಯೆ | ವಲಯದ ಹೆಸರು | ಸರಬರಾಜಿನ ವಿವರ | ಫಲಾನುಭವಿಗಳ ಸಂಖ್ಯೆ | ಸರಬರಾಜು ಮಾಡಬೇಕಾದ ಜೇನು ಪೆಟ್ಟಿಗೆಗಳ ಸಂಖ್ಯೆ (ಪರಿಕರಗಳೊಂದಿಗೆ) | ಅಂದಾಜು ಮೊತ್ತ ರೂ.ಗಳಲ್ಲಿ | ಇ.ಎಮ್.ಡಿ. ಮೊತ್ತ ರೂ. |
|---|---|---|---|---|---|---|
| 1 | ಬಂಟ್ವಾಳ | Supply of Honeybee Box 500 Nos (200 box with family) including transportation and fixing charges & Stand as per the specification mentioned below | 15 | 75 | 300,000 | 7,500 |
| 2 | ಬೆಳ್ತಂಗಡಿ | | 15 | 75 | 300,000 | 7,500 |
| 3 | ಉಪ್ಪಿನಂಗಡಿ | | 15 | 75 | 300,000 | 7,500 |
| 4 | ಪುತ್ತೂರು | | 10 | 50 | 200,000 | 5,000 |
| 5 | ಪಂಜ | | 10 | 50 | 200,000 | 5,000 |
| 6 | ಸುಳ್ಯ | | 20 | 100 | 400,000 | 10,000 |
| 7 | ಸುಬ್ರಹ್ಮಣ್ಯ | | 15 | 75 | 300,000 | 7,500 |
| | **ಒಟ್ಟು** | | **100** | **500** | **2,000,000** | 50,000 |

# Schedule (Annexure –I)

**Honeybee Box Stand Measurement**

| Sl No. | Particulars |
|---|---|
| 1. | 3 feet height,<br>Rustless GI pipe 1" diameter<br>'H' shape iron bar painting with approved enamel paint and duly fixing to the ground with concrete. |
| Honeybee Box Measurement | |
| 2. | Bottom Measurement :<br>1. length – 14 inch<br>2. width – 13.5 inch |
| 3. | Box Family Compartment Measurement:<br>1. width – 11.5 inch<br>2. length – 11.5 inch<br>Supara Measurement<br>1. width 11.5 inch<br>2. length – 1.5 inch<br>3. height – 4 inch |
| 4. | Box lid Measurement :<br>1. length – 13 inch<br>2. width – 13.5 inch<br>3. height – 3 inch |
| ಪ್ರತೀ ಫಲಾನುಭವಿಗೆ 5 ಜೇನುಪೆಟ್ಟಿಗೆಗಳನ್ನು ಅದರಲ್ಲಿ ಮೊದಲ ಬಾರಿಗೆ 2 ಪೆಟ್ಟಿಗೆಗಳನ್ನು (ಜೇನು ಕುಟುಂಬ, ಸಾಗಾಣಿಕೆ ವೆಚ್ಚ, ಅಳವಡಿಕೆ ವೆಚ್ಚ, ಸ್ಟಾಂಡ್ ಸೇರಿ) ನೀಡುವುದು. (ನಂತರ ಉಳಿದ 3 ಜೇನು ಪೆಟ್ಟಿಗೆಗಳನ್ನು ಸಲಕರಣೆಗಳೊಂದಿಗೆ ಸಂಬಂಧಪಟ್ಟ ವಲಯ ಕಛೇರಿಗೆ ಸರಬರಾಜು ಮಾಡುವುದು.) | |

**ಷರತ್ತುಗಳು**

1. ಟೆಂಡರ್ ಫಾರಂ ಬೆಲೆ ರೂ. 250/–ನ್ನು (ಎಲ್ಲಾ ತೆರಿಗೆಗಳು ಸೇರಿ) ಪಾವತಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿಯಿಂದ ದಿನಾಂಕ:04.05.2019 ರಂದು ಅಪರಾಹ್ನ 05–30 ಗಂಟೆಯ ಒಳಗೆ ಕಛೇರಿ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳುವುದು. ಟೆಂಡರಿನ ಫಾರಂ ಮೌಲ್ಯವನ್ನು ಹಿಂದಿರುಗಿಸಲಾಗುವುದಿಲ್ಲ ಹಾಗೂ ವರ್ಗಾಯಿಸಲಾಗುವುದಿಲ್ಲ. ಹಾಗೂ ಮರುಟೆಂಡರ್ ಆದಲ್ಲಿ ದಿನಾಂಕ:09.05.2019 ರಂದು ಅಪರಾಹ್ನ 05–30 ಗಂಟೆಯ ಒಳಗೆ ಕಛೇರಿ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳುವುದು.

2. ಮಾದರಿ ಜೇನು ಗೂಡು ಪೆಟ್ಟಿಗೆಯನ್ನು ದಿನಾಂಕ:30–04–21019 ರೊಳಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ , ಮಂಗಳೂರು ವಿಭಾಗ , ಮಂಗಳೂರು ಇಲ್ಲಿ ಸಲ್ಲಿಸತಕ್ಕದ್ದು

3. ಟೆಂಡರ್‌ದಾರರು ಸೂಚಿಸುವ ದರ, ಎಲ್ಲಾ ತೆರಿಗೆಗಳು , ಸೇರಿ ಬೆಲೆಯನ್ನು (Lump sum) ಒಟ್ಟಾರೆ ದರ ನಮೂದಿಸುವುದು.

4. ಟೆಂಡರ್‌ನಲ್ಲಿ ಯಶಸ್ವಿಯಾದ ಅರಣ್ಯ ಗುತ್ತಿಗೆದಾರರು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರಿಂದ ತಿಳುವಳಿಕೆ ನೀಡಿದ 7 ದಿನಗಳ ಒಳಗಾಗಿ ಈ ಕಛೇರಿಗೆ ಹಾಜರಾಗಿ ರೂ. 200/-ಗಳ ಮೌಲ್ಯದ ಛಾಪಾ ಕಾಗದದಲ್ಲಿ ಕರಾರುನಾಮೆ ಮಾಡಿಸಿಕೊಂಡು ಅದರಲ್ಲಿ ಸಹಿ ಮಾಡಿ ಕಾರ್ಯಾದೇಶ ಪಡೆದುಕೊಂಡು ನಿಗದಿಪಡಿಸಿದ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು. ಕೆಲಸದ ಅವಧಿಯನ್ನು ವಿಸ್ತರಿಸುವ ಅಥವಾ ಕೈಬಿಡುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹೊಂದಿರುತ್ತಾರೆ.
5. ಟೆಂಡರ್ ಅಂಗೀಕಾರವಾದ 15 ದಿನಗಳೊಳಗೆ ಈ ಕೆಳ ಸಹಿದಾರರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕು. ಒಡಂಬಡಿಕೆ (ಕರಾರುನಾಮೆ) ಸಂದರ್ಭದಲ್ಲಿ ಟೆಂಡರ್ ಮೊತ್ತದ ಶೇಕಡಾ 5ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಇರಿಸಬೇಕು.
6. ಯಶಸ್ವಿ ಟೆಂಡರ್‌ದಾರರು ಈ ಕಛೇರಿಯಿಂದ ಕಾರ್ಯಾದೇಶ ಪಡೆದ 30 ದಿನಗಳ ಅವಧಿಯೊಳಗೆ ಜೇನುಪೆಟ್ಟಿಗೆಗಳನ್ನು ಅಳವಡಿಕೆ ಸಲಕರಣೆಗಳೊಂದಿಗೆ ನಿಗದಿತ ಸ್ಥಳಗಳಿಗೆ ಸರಬರಾಜು ಮಾಡಿ ಅಳವಡಿಸತಕ್ಕದ್ದು. ಪ್ರತೀ ಫಲಾನುಭವಿಗಳಿಗೆ ಐದು ಜೇನು ಪೆಟ್ಟಿಗೆ, ಸ್ಟಾಂಡ್ (ಅಳವಡಿಕೆ ವೆಚ್ಚ, ಸಾಗಾಣಿಕೆ ವೆಚ್ಚ ಸೇರಿ)ಗಳನ್ನು ಫಲಾನುಭವಿಗಳ ಸ್ಥಳಗಳಿಗೆ ಸರಬರಾಜು ಮಾಡಿ ಅಳವಡಿಸುವುದು ಆ ಪೈಕಿ ಮೊದಲನೇ ಕಂತಿನಲ್ಲಿ ಎರಡು ಪೆಟ್ಟಿಗೆಗಳನ್ನು ಜೇನು ಪೆಟ್ಟಿಗೆ ಎಲ್ಲಾ ಸಾಮಾಗ್ರಿ ಹಾಗೂ ಜೇನು ಕುಟುಂಬದೊಂದಿಗೆ ಮತ್ತು ಎರಡನೇ ಕಂತಿನಲ್ಲಿ ಉಳಿದ ಮೂರು ಪೆಟ್ಟಿಗೆಗಳನ್ನು ಎಲ್ಲಾ ಅಳವಡಿಕೆ ಸಲಕರಣೆಗೊಂದಿಗೆ ಸರಬರಾಜು ಮಾಡಿ ಫಲಾನುಭವಿಗಳ ಸ್ಥಳಕ್ಕೆ ಅಳವಡಿಸುವುದು.
7. ಯಾವುದೇ ಕಾರಣದಿಂದ ಸರಬರಾಜು ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲ, ಒಂದು ವೇಳೆ ನಿಗದಿತ ಕಾಲಾವಧಿಯೊಳಗೆ ಸರಬರಾಜನ್ನು ಪೂರ್ಣಗೊಳಿಸದಿದ್ದರೆ ಉಪ ಅರಣ್ಯ ಸಂರಕ್ಷಾಧಿಕಾರಿಗಳು ವಿಧಿಸುವ ದಂಡಕ್ಕೆ ಬದ್ಧರಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಲಿಖಿತ ಕಾಲ ವಿಸ್ತರಣೆ ಆದೇಶ ಪಡೆದುಕೊಳ್ಳತಕ್ಕದ್ದು, ಕಾಲ ವಿಸ್ತರಣೆ ಪಡೆದಲ್ಲಿ ಬಿಲ್ಲಿನ ಮೊತ್ತದಲ್ಲಿ ಶೇ.5 ರಷ್ಟು ಮೊತ್ತವನ್ನು ಅವಧಿ ವಿಸ್ತರಣಾ ಶುಲ್ಕ ಎಂದು ಕಡಿತಗೊಳಿಸಲಾಗುವುದು.
8. ಭಾಗಶಃ ಸರಬರಾಜು ಮಾಡಿದ ಪ್ರಸಂಗದಲ್ಲಿ ಅಂತಹ ಭಾಗಶಃ/ಅಪೂರ್ಣ ಕೆಲಸಗಳಿಗೆ ಯಾವುದೇ ಹಣ ಪಾವತಿ ಮಾಡುವುದಿಲ್ಲ ಅಲ್ಲದೆ ಟೆಂಡರುದಾರರ ಸ್ವಂತ ಜವಾಬ್ದಾರಿಯ ಮೇಲೆ ಸರಬರಾಜನ್ನು ಕಾನೂನಿನನ್ವಯ ಕಾರ್ಯಗತಗೊಳಿಸಲಾಗುವುದು. ಅಲ್ಲದೆ ಸದರಿ ಟೆಂಡರ್‌ದಾರರ ಭದ್ರತಾ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ಜೇನುಪೆಟ್ಟಿಗೆಗಳನ್ನು ಫಲಾನುಭವಿಗಳ ಮನೆಯಲ್ಲಿ ಅಳವಡಿಸಿದ ನಂತರ, ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಜೇನುಪೆಟ್ಟಿಗೆಗಳನ್ನು ಪರಿಶೀಲನೆ ಮಾಡಿಸಿ ತದ ನಂತರ ಸರಬರಾಜುದಾರರಿಗೆ ಹಣ ಪಾವತಿಗಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಬಿಲ್ಲನ್ನು ಸಲ್ಲಿಸಬೇಕಾಗಿರುತ್ತದೆ.
10. ಸರಬರಾಜು ಮಾಡಿದ ಜೇನುಪೆಟ್ಟಿಗೆಗಳನ್ನು ಫಲಾನುಭವಿಗಳ ಮನೆಗಳಲ್ಲಿ ಅಳವಡಿಸಿದ ನಂತರ, ತಾಂತ್ರಿಕ ದೋಷ ಕಂಡು ಬಂದಲ್ಲಿ, ಸರಬರಾಜುದಾರರು ಅದಕ್ಕೆ ಬದಲಾಗಿ ಬದಲಿ ಜೇನುಪೆಟ್ಟಿಗೆಯನ್ನು ಕೂಡಲೇ ಅವರ ಸ್ವಂತ ಖರ್ಚಿನಲ್ಲಿ ಸರಬರಾಜು ಮಾಡಬೇಕಾಗಿರುತ್ತದೆ.

11. ಸರಬರಾಜು ಮಾಡಿರುವ ಸಾಮಗ್ರಿಗೆ ಹಣ ಪಾವತಿ ಮಾಡುವ ಸಮಯದಲ್ಲಿ ಬಿಲ್ಲಿನ ಮೊತ್ತದಲ್ಲಿ ಚಾಲ್ತಿಯಲ್ಲಿರುವ ತೆರಿಗೆಗಳನ್ನು ಕಟಾವಣೆ ಮಾಡಲಾಗುವುದು.
12. ಯಶಸ್ವಿಯಾದ ಟೆಂಡರ್‌ದಾರರು ನೀಡಿದ ಅವಧಿಯೊಳಗೆ ಎಲ್ಲಾ ವಲಯಗಳಿಗೆ ಜೇನುಪೆಟ್ಟಿಗೆ ಸರಬರಾಜು ಮಾಡಲು ವಿಫಲರಾದಲ್ಲಿ ಅಥವಾ ಭಾಗಶ: ಸರಬರಾಜು ಮಾಡಿದಲ್ಲಿ, ಭದ್ರತಾ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅವರ ಸ್ವಂತ ಖರ್ಚಿನಲ್ಲೇ ಮರುಟೆಂಡರ್ ಕರೆಯಲು ಕ್ರಮಕೈಗೊಳ್ಳಲಾಗುವುದು.
13. ಅವಶ್ಯ ಬಿದ್ದಲ್ಲಿ ಹೆಚ್ಚುವರಿ ಜೇನುಪೆಟ್ಟಿಗೆ ಸರಬರಾಜು ಮಾಡಬೇಕಾಗಿ ಬಂದಲ್ಲಿ, ಇದೇ ದರದಲ್ಲಿ ಹೆಚ್ಚುವರಿ ಜೇನುಪೆಟ್ಟಿಗೆಗಳನ್ನು  ಸರಬರಾಜು ಮಾಡಲು ಬದ್ಧರಿರತಕ್ಕದ್ದು.
14. ಸರಬರಾಜು ಮಾಡಿದ ಜೇನುಪೆಟ್ಟಿಗೆಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುವ ಕುರಿತು, ಎಲ್ಲಾ ವಲಯ ಅರಣ್ಯ ಅಧಿಕಾರಿಗಳಿಂದ ಕಾರ್ಯ ಪೂರೈಕೆಯ ಸಮಾಪನಾ ವರದಿ ಬಂದು, ಮೂರು ತಿಂಗಳುಗಳ ನಂತರ ಭದ್ರತಾ ಠೇವಣಿಯನ್ನು ಟೆಂಡರ್‌ದಾರರಿಗೆ ಹಿಂದಿರುಗಿಸಲಾಗುವುದು.
15. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ), ಮಂಗಳೂರು/ ಉಪ ಅರಣ್ಯ ಸಂರಕ್ಷಣಾಧಿಕಾರಿ ಮಂಗಳೂರು ವಿಭಾಗ, ಮಂಗಳೂರು ಇವರು ಟೆಂಡರ್‌ಗಳನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ.
16. ಪ್ರಸ್ತುತ ಟೆಂಡರ್ ಪ್ರಕ್ರಿಯೆಯ ಅನುಸೂಚಿಯಲ್ಲಿ ನಮೂದಿಸಿದ ಸ್ಥಳವನ್ನು ಅನಿವಾರ್ಯ ಪರಿಸ್ಥಿತಿಯಲ್ಲಿ ಬದಲಾಯಿಸುವಂತಹ ಅಧಿಕಾರವು ಈ ಕೆಳಸಹಿದಾರರಿಗೆ ಇರುತ್ತದೆ.
17. ಜೇನುಪೆಟ್ಟಿಗೆ ಸರಬರಾಜಿನ ಕೆಲಸವು ಪೂರ್ಣ ಪ್ರಮಾಣದಲ್ಲಿ ಮುಕ್ತಾಯವಾದ ಕೂಡಲೇ ಸದರಿ ಕಾರ್ಯವನ್ನು ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿ ಇವರಿಂದ ಪರಿಶೀಲನೆ ನಡೆಸಿ ದೃಢೀಕರಣ ಪತ್ರದೊಂದಿಗೆ ಹಣ ಪಾವತಿಗಾಗಿ ಸಾಧಿಲ್ವಾರು ಬಿಲ್ಲನ್ನು ವಲಯ ಅರಣ್ಯಾಧಿಕಾರಿಗಳ ಮುಖಾಂತರ ಸಲ್ಲಿಸತಕ್ಕದ್ದು.
18. ಟೆಂಡರ್ ವಿಷಯದಲ್ಲಿ ವಿವಾದ ಉಂಟಾದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಪ್ರಾದೇಶಿಕ) ಮಂಗಳೂರು ಇವರು ಮೇಲ್ಮನವಿ ಅಧಿಕಾರಿಗಳಾಗಿದ್ದು, ಅವರ ತೀರ್ಮಾನವೇ ಅಂತಿಮವಾಗಿರುತ್ತದೆ. ನ್ಯಾಯಿಕ ವ್ಯಾಜ್ಯಗಳು ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ಸಿವಿಲ್ ನ್ಯಾಯಾಲಯ ವ್ಯಾಪ್ತಿಗೆ ಮಾತ್ರ ಸೀಮಿತವಾಗಿರುತ್ತದೆ.
19. ಯಶಸ್ವಿ ಟೆಂಡರ್‌ದಾರರು ನಿಗಧಿತ ಸಮಯದಲ್ಲಿ ಜೇನುಪೆಟ್ಟಿಗೆ ಸರಬರಾಜು ಪ್ರಾರಂಭಿಸದಿದ್ದಲ್ಲಿ, ನಿರಾಸಕ್ತಿ ಹೊಂದಿದಲ್ಲಿ ಅಂತಹ ಟೆಂಡರ್‌ದಾರರ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ ಗುತ್ತಿಗೆ ಕೆಲಸವನ್ನು ಮೂಲ ಗುತ್ತಿಗೆದಾರರ ಖರ್ಚು ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಕರೆಯಲಾಗುವುದು ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖೆಯಿಂದ ಜೇನುಪೆಟ್ಟಿಗೆ ಸರಬರಾಜನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963 ಕಲಂ 109 ಮತ್ತು 119 ರಂತೆ ಭೂಕಂದಾಯ ಬಾಕಿ ವಸೂಲಿಯಂತೆ ವಸೂಲು ಮಾಡಲಾಗುವುದು.
20. ಈ ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ  ಆರ್‌ಬಿಟ್ರೇಷನ್ ಕೇಂದ್ರ (ದೇಶೀಯ ಮತ್ತು ಅಂತರ್‌ದೇಶೀಯ), ನಿಯಮಗಳು, 2012ರಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಲು ಒಪ್ಪಿಕೊಳ್ಳಲಾಗಿದೆ.

21. ಹೆಚ್ಚಿನ ಮಾಹಿತಿ ಅಥವಾ ವಿವರಗಳನ್ನು ಈ ಕಛೇರಿಯಿಂದ ರಜಾದಿನಗಳನ್ನು ಹೊರತು ಪಡಿಸಿ, ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದು.

22. ಟೆಂಡರ್‌ದಾರರು ಅಂದಾಜು ಮೊತ್ತದ 15% ಗಿಂತ ಕಡಿಮೆ ದರವನ್ನು ಸೂಚಿಸಿದಲ್ಲಿ ವ್ಯತ್ಯಾಸದ ಮೊತ್ತವನ್ನು ಹೆಚ್ಚುವರಿ ಭದ್ರತಾ ಠೇವಣಿಯಾಗಿ ಕರಾರುನಾಮೆ ಸಹಿಮಾಡುವ ಸಂದರ್ಭದಲ್ಲಿ ಇರಿಸಬೇಕಾಗುತ್ತದೆ.

23. ತಾಂತ್ರಿಕ ಬಿಡ್ಡನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರು ಹೊಂದಿದ್ದು, ಅವರ ತೀರ್ಮಾನ ಅಂತಿಮವಾಗಿರುತ್ತದೆ.

24. ಟೆಂಡರ್ ಪ್ರಕ್ರಿಯೆಯನ್ನು ಯಾವುದೇ ಕಾರಣ ನೀಡದೆ ಸ್ಥಗಿತಗೊಳಿಸುವ ಇಲ್ಲವೇ ಹಿಂಪಡೆಯುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರು ಹೊಂದಿರುತ್ತಾರೆ.

25. ಸದರಿ ಜೇನುಪೆಟ್ಟಿಗೆಯನ್ನು ತಾಂತ್ರಿಕವಾಗಿ ಇಲಾಖಾ ವತಿಯಿಂದ, ತಾಂತ್ರಿಕ ಪರೀಕ್ಷೆಗೊಳಪಡಿಸಲಾಗುವುದು ಮತ್ತು ಸದರಿ ತಾಂತ್ರಿಕ ಪರೀಕ್ಷೆಗೆ ತಗಲುವ ವೆಚ್ಚವನ್ನು ಯಶಸ್ವಿ ಟೆಂಡರ್‌ದಾರರು ಪಾವತಿಸಲು ಬದ್ಧರಿರಬೇಕು

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವಿಭಾಗ, ಮಂಗಳೂರು.